ಅಲಂಕಾರ

# ನೇಪಾಳದ ತುತ್ತೂರಿ ಹೂ

■ ಡಾ. ಎಂ. ವಸುಂಧರ





ಬಳ್ಳಿಗಳಲ್ಲಿ ಸಂಗಂಧಭರಿತ ಬಳ್ಳಿಗಳೆಂದರೆ ರಂಗೂನ್ ಕ್ರೀಪರ್, ಕೋನೆ–ಮಾರ್ಫ, ಬ್ಯೂಮಾನ್ಷಿಯ ಗ್ರಾಂಡಿಫ್ಲೋರ, ಮಾಧವೀ ಲತ ಮುಂತಾದವು.

ಭಾರತದ್ದೇ ಆದ ಕೊನೆಮಾರ್ಫ ಮ್ಯಾಕ್ರೊಫಿಲ್ಲಾ (ನೇಪಾಳದ ತುತ್ತೂರಿ) ಬಳ್ಳಿಯು ಭಾರೀ ಗಾತ್ರದ್ದಾಗಿದ್ದು ಅಪೊಸೈನೇಸಿ ಕುಟುಂಬಕ್ಕೆ ಸೇರಿದೆ. ಇದಕ್ಕೆ ಆಸರೆ ಕೊಡುವಾಗ ಗಟ್ಟಿಯಾದ ಕಲ್ಲು ಅಥವಾ ಕಬ್ಬಿಣದ ಕಂಬಗಳನ್ನು ಕೊಡುವುದು ಸೂಕ್ತ. ಬಳ್ಳಿಯಂತೆಯೇ ಎಲೆಗಳೂ ಬಹಳ ಅಗಲ. 25 ಸೆಂ.ಮೀ.ನಷ್ಟು ಉದ್ದವಿದ್ದು 10–18 ಸೆಂ.ಮೀ. ನಷ್ಟು ಅಗಲವಿದೆ. ಈ ಮ್ಯಾಕ್ರೊಫಿಲ್ಲಾ ಬಳ್ಳಿಯನ್ನು ಬೆಂಗಳೂರಿನಲ್ಲಿ ಲಾಲ್‌ಬಾಗ್‌ನಲ್ಲಿ ಮಾತ್ರ ನೋಡಿದ್ದಂತೆ ನೆನಪು.

ಈ ಬಳ್ಳಿಯನ್ನು ಸುಗಂಧ ಮನೆಯ ವನದಲ್ಲಿ ನೆಡುವಾಗ ಇಷ್ಟು ಬೃಹದಾಕಾರವಾಗಿ ಬೆಳೆಯಬಲ್ಲುದೆಂಬ ಕಲ್ಪನೆಯೇ ಇರಲಿಲ್ಲ. ಈ ಬಳ್ಳಿ ಬೆಳೆಯುವ ಪರಿ ನೋಡಿ ಎಲ್ಲಿ ಕಮಾನನ್ನೇ ಮುರಿದು ಹಾಕುತ್ತದೆಯೋ ಎನ್ನುವ ಯೋಚನೆಯಾಗಿತ್ತು. ಆದರೆ ಬಳ್ಳಿಯನ್ನು ಆಗಾಗ ಸವರುವಿಕೆ ಮಾಡಿ, ಬೇಕಾದ ಆಕಾರದಲ್ಲಿ ಹಿಡಿದಿರಿಸಬಹುದು.

ಸವರುವಿಕೆಯನ್ನು ಮಳೆಗಾಲಕ್ಕೆ ಮೊದಲು ಅಂದರೆ ಫೆಬ್ರುವರಿ, ಮಾರ್ಚ್ ತಿಂಗಳಲ್ಲಿ (ವಸಂತಕಾಲ) ಮಾಡಿದರೆ ಮಳೆಗಾಲದಲ್ಲಿ ಸುಂದರ ಹೂವುಗಳನ್ನು ನೋಡಲು ಸಾಧ್ಯ. ಹೂವುಗಳು ತುತ್ತೂರಿ ಆಕಾರದಲ್ಲಿ ಗೊಂಚಲುಗಳಲ್ಲಿ ಕಂಡುಬರುತ್ತವೆ. ಕೆನೆಬಣ್ಣದ ಹೂಗಳು ಮೇ ತಿಂಗಳಿಂದ ಜುಲೈ ತಿಂಗಳವರೆಗೆ ಇರುತ್ತವೆ. ಗೂಟಿ ಮೂಲಕ ವೃದ್ಧಿಯಾಗುವ ಈ ಬಳ್ಳಿಗಳನ್ನು ಬಿರುಸು ಸವರುವಿಕೆಯೊಂದಿಗೆ ನಿರ್ದಿಷ್ಟವಾದ ಆಸರೆ ಕಂಬಗಳಿಗೆ ಹಬ್ಬುವಂತೆ ಮಾಡಬೇಕು. ವರ್ಷಕ್ಕೆ ಒಂದು ಬಾರಿ ಬಳ್ಳಿಗಳು ಸುಪ್ತವಾಗಿದ್ದಾಗ ಈ ಕೆಲಸ ಮಾಡುವುದು ಒಳ್ಳೆಯದು. ನಮಗೆ ಬೇಕಾದ ದಿಕ್ಕಿನಲ್ಲಿ ಬೆಳೆಸಬೇಕಾದ ದೊಡ್ಡ ರೆಂಬೆಗಳನ್ನು ಬುಡದಲ್ಲಿ ಕತ್ತರಿಸಬೇಕಾಗಬಹುದು. ಸವರುವಿಕೆಯ ಎಷ್ಟು ದಿನಗಳ ನಂತರ ಹೂವು ಹೊರ ಹೊಮ್ಮುತ್ತದೆ, ಹೂವು ಹಳೆಯ ರೆಂಬೆಗಳಿಂದ ಬರುತ್ತದೆಯೋ ಅಥವಾ ಹೊಸರೆಂಬೆಗಳಿಂದ ಬರುತ್ತದೆಯೋ ಎಂದು ಗಮನಿಸಿ ಸೂಕ್ತವಾಗಿ ಕತ್ತರಿಸಬೇಕು. ಕೆಲವು ಬಳ್ಳಿಗಳಲ್ಲಿ ಒಂದು ನಿರ್ದಿಷ್ಟವಾದ ರೀತಿಯಲ್ಲಿ ಸವರುವಿಕೆ ಮಾಡಿದರೆ ಮಾತ್ರ ಹೂವುಗಳು ಮೂಡುತ್ತವೆ.

ಬ್ಯೂಮಾಂಶಿಯ ಗ್ರಾಂಡಿಫ್ಲೋರ ಎತ್ತರವಾದ ಸ್ಥಳಗಳಿಗೆ ಹಬ್ಬಿಸಲು ಯೋಗ್ಯವಾದ ದೊಡ್ಡ ಬಳ್ಳಿ. ಪರಿಮಳ ಹಾಗೂ ಬಣ್ಣ, ಬೇಸಿಗೆಯಲ್ಲಿ ಅಕ್ಷಿ ಹಾಗೂ ನಾಸಿಕಗಳಿಗೆ ಹಿತವಾಗಿರುತ್ತದೆ. ಹೂವಿನಲ್ಲಿರುವ ಐದು ದಳಗಳೂ ಸೇರಿ ಒಂದು ನಾಳವಾಗಿ ತುತ್ತೂರಿಯಂತೆ ಕಾಣಿಸುತ್ತದೆ. ಆದರೆ ತುದಿಯಲ್ಲಿ ಬೇರೆ ಬೇರೆ ಇರುತ್ತದೆ. ಹೆಚ್ಚು ಆರೈಕೆ ಬೇಕಾಗಿಲ್ಲ. ಸಾಧಾರಣ ಮರಳು ಮಿಶ್ರಿತ ಮಣ್ಣಿನಲ್ಲಿ ಬೆಳೆಯಬಹುದು. ಜನವರಿಯಿಂದ ಮಾರ್ಚ್ ತಿಂಗಳವರೆಗೆ ಗೊಂಚಲುಗಳಲ್ಲಿ ಹಗುರವಾದ ಸುವಾಸನೆಯುಳ್ಳ ಹೂವುಗಳನ್ನು ಕಾಣ–ಬಹುದು. ಸಾಮಾನ್ಯವಾಗಿ ಹೊಸ ಚಿಗುರಿನ ಮೇಲೆ ಮೊಗ್ಗುಗಳಾಗಿ ಹೂವು ಕಂಡುಬರುತ್ತವೆ. ಆದ್ದರಿಂದ ಹೂಗಳ ಋತುಮಾನ ಮುಗಿದ ನಂತರ ರೆಂಬೆ–ಗಳನ್ನು ಕತ್ತರಿಸಬೇಕು. ಈ ಬಳ್ಳಿ ಬಹಳ ಭಾರವಿರುವುದರಿಂದ ದೊಡ್ಡ ಕಮಾನು ಅಥವಾ ಮರಗಳ ಮೇಲೆ ಹಬ್ಬಿಸಬೇಕು.

ಮತ್ತೊಂದು ಬ್ಯೂಮಾಂಶಿಯ ಪ್ರಭೇದ ಕೂಡ ನಮ್ಮ ರಾಜ್ಯದಲ್ಲಿದೆ. ಇದರ ವೈಜ್ಞಾನಿಕ ಹೆಸರು ಬ್ಯುಮಾಂಶಿಯ ಜೆರ್ಡೊನಿಯಾನ. ಇದು ಸಣ್ಣ ಬಳ್ಳಿ. ಒತ್ತಾಗಿಯೂ ಬೆಳೆಯುತ್ತದೆ. ಇದರ ಹೂವು ಬಿಳುಪು ಹಾಗೂ ಸುವಾಸಿತ.